ಬೇಡಿಕೆಯನ್ನು ಒಳಗೊಂಡಂತೆ ಸಿದ್ಧಪಡಿಸಿ ಕಂದಾಯ ಇಲಾಖೆ ಮುಖೇನ CRF/NCCF ಮತ್ತು ARWSP - Scarcity ಯಡಿ ವಿಶೇಷ ಅನುದಾನ ಬಿಡುಗಡೆಗಾಗಿ ಭಾರತ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ

164 (267) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಕೃಷಿ ಮಾರುಕಟ್ಟೆ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಳವಡಿಸಿಕೊಳ್ಳಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ,

ಆ) ಈ ಪ್ರಕ್ರಿಯೆ ಯಾವ ಹಂತದಲ್ಲಿದೆ , ಇದನ್ನು ತಡೆಗಟ್ಟಲು ಅಧಿಕಾರಿಗಳಿಗೆ ನೀಡಿದ ಸೂಚನೆಗಳೇನು , ವಿಳಂಬ ನೀತಿಯಿಂದ ಹಲವಾರು ನೌಕರರು ಬಡ್ತಿಯಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ಇದಕ್ಕೆ ಕೆಲ ಅಧಿಕಾರಿಗಳ ವಿರೋಧವಿರುವುದು ನಿಜವೇ ,

ಈ) ಅದಕ್ಕೆ ಕಾರಣಗಳೇನು ಮತ್ತು ಅಂತಹ ಅಧಿಕಾರಿಗಳು ಯಾರ್ಯಾರು ,

ಉ) ಇವರುಗಳ ಮೇಲೆ ಕ್ರಮ ಜರುಗಿಸಲಾಗುವುದೇ ,

ಊ) ಈ ನಿಟ್ಟಿನಲ್ಲಿ ಕಾರ್ಯಕಾರಿ ಆದೇಶವನ್ನು ಯಾವ ಅಧಿಸೂಚನೆ ಆಧಾರದ ಮೇಲೆ ರೂಪಿಸಲಾಗಿದೆ (ಅಧಿನಿಯಮ ಪ್ರತಿ ಒದಗಿಸುವುದು) ,

ಋ) ಅಧಿಸೂಚನೆಯಲ್ಲಿ ನಮೂದಿಸದ ಬೆರಳಚ್ಚುಗಾರರನ್ನು ಕಾರ್ಯಕಾರಿ ಆದೇಶದಲ್ಲಿ ನಮೂದಿಸಿರುವುದು ನಿಜವೇ , ಇದರ ಔಚಿತ್ಯವೇನು (ಕಾರ್ಯಕಾರಿ ಆದೇಶದ ಪ್ರತಿ ಒದಗಿಸುವುದು) ,

ಋೂ) ಅಮಾಲ್ಗಮೇಷನ್ ಆದೇಶವನ್ನು ತಿರುಚಿರುವಂತಹ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಶಿಸ್ತು ಕ್ರಮ ಜರುಗಿಸುವುದು (ಅಮಾಲ್ಗಮೇಷನ್ ಆದೇಶದ ಪ್ರತಿ ಒದಗಿಸುವುದು) ?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು):

ಅ) ಕರಡು ಅಧಿಸೂಚನೆಯನ್ನು ಪ್ರಕಟಿಸಲಾಗಿದ್ದು, ಅದರ ಮೇಲೆ ಅನೇಕ ಸಲಹೆ ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳ ಪರಿಶೀಲನೆಯಲ್ಲಿದೆ , ಹಾಗೂ ತಾಂತ್ರಿಕ ಸಿಬ್ಬಂದಿಗಳಿಗೆ ಕೆಲವು

ಮಾರ್ಪಾಡುಗಳನ್ನು ಸೇರಿಸಲು ಉದ್ದೇಶಿಸಿರುವುದರಿಂದ ಪರಿಷ್ಕೃತ ಕರಡು ಅಧಿಸೂಚನೆಯನ್ನು ಹೊರಡಿಸಲು ಉದ್ದೇಶಿಸಿದೆ

ಆ) ಇಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

ಊ) ಅಂತಿಮವಾಗಿ ಅಧಿಸೂಚನೆಯನ್ನು ಹೊರಡಿಸಿರುವುದಿಲ್ಲ

ಋ) ಇಲ್ಲ

ೠ) ಉದ್ಭವಿಸುವುದಿಲ್ಲ ಅಮಾಲ್ಗಮೇಷನ್ ಆದೇಶದ ಪ್ರತಿಯನ್ನು ಪ್ರತ್ಯೇಕವಾಗಿ ಮಾನ್ಯ ಶಾಸಕರಿಗೆ ಒದಗಿಸಲಾಗುವುದು

* * * * *